# ಹುಲಿ ಹಿಡಿದವರು...

(43ನೇ ಪುಟದಿಂದ)

ನಮ್ಮ ಹುಡುಕಾಟ ಮುಂದುವರಿಯಿತು. ಸುಮಾರು ಒಂದೂ ಕಾಲು ಗಂಟೆಯ ಹುಡುಕಾಟದ ಬಳಿಕ ಬಟಲ್ ಕ್ವಾವೆಲ್ ಪಕ್ಷಿಗಳು ಪುರ್ರೆಂದು ಹಾರುವುದು ಕಾಣಿಸಿತು. ಅದು ಹುಲಿ ಇದೆ ಎನ್ನುವುದರ ಸೂಚನೆ! ಹುಲಿ ಕಾಣಿಸಿತು. ಮತ್ತೆ ಅರವಳಿಕೆ ಮದ್ದನ್ನು ಶೂಟ್ ಮಾಡಿದೆವು. ಆದರೆ ಲಂಟಾನಾ ಪೊದೆಗಳ ದಟ್ಟನೆಯಿಂದಾಗಿ ಹುಲಿಗೆ ಗುರಿ ತಾಗಲಿಲ್ಲ.

ನಾವು ಗನ್‌ನಿಂದಲೇ ಶೂಟ್ ಮಾಡಬಹುದಿತ್ತು. ಆದರೆ ಸಜೀವವಾಗಿ ಅದನ್ನು ಹಿಡಿಯಬೇಕೆಂಬುದೇ ನಮ್ಮ ಸಂಕಲ್ಪವಾಗಿತ್ತು. ಒಟ್ಟಿಗೆ 6 ಸಲ ಅರೆವಳಿಕೆ ಚುಚ್ಚು ಮದ್ದು ಶೂಟ್ ಮಾಡಿದರೂ ಅದೃಷ್ಟ ಹುಲಿಗೇ ಒಲಿಯಿತು. ಮತ್ತೆ ಅದು ಕಣ್ಮರೆಯಾಯಿತು.

ಈ ಮಧ್ಯೆ ಚಿಕ್ಕಬರ್ಗಿಯ ದುರಂತ ನಡೆಯಿತು. ದನ ಮೇಯಿಸಲು ಹೋದ ರೈತ ವಾಪಸ್ ಬರಲಿಲ್ಲ. ಆದರೆ ದನಗಳೆಲ್ಲ ವಾಪಸ್ ಬಂದಿದ್ದವು. ಹಳ್ಳಿಗರಿಗೆ ಸಂಶಯ ಬಂದು ಅರಣ್ಯ ಇಲಾಖೆಯ ಸಿಬ್ಬಂದಿ ಜತೆಗೆ ಹೋಗಿ ಹುಡುಕಿದಾಗ ಆ ರೈತನ ರಕ್ತಸಿಕ್ತ ಕಾಲು ಕಾಣಿಸಿತು. ಗ್ರಾಮಸ್ಥರು ರೊಚ್ಚಿಗೇಳಲು ಅಷ್ಟೇ ಸಾಕಾಯಿತು. ಸ್ವಲ್ಪ ಮುಂದೆ ಆತನ ದೇಹ ಬಿದ್ದಿತ್ತು. ಅಲ್ಲೇ ಹುಲಿಯಿತ್ತು. ಪೊಲೀಸರು ಹಲವು ಸುತ್ತುಗಳ ಏರ್‌ಫೈರ್ ಮಾಡಿ ಆ ರೈತನ ಹೆಣವನ್ನು ಹೊತ್ತು ತಂದರು. ಜನರು ತೀರಾ ಸಿಟ್ಟಿಗೆದ್ದು ಪ್ರತಿಭಟನೆ ನಡೆಸಿದ್ದರಿಂದ ಆ ದಿನ ಮತ್ತೆ ಹುಡುಕಾಟ ನಡೆಯಲಿಲ್ಲ.

ಮರುದಿನ ಮತ್ತೆ ಶೋಧ ಶುರುವಾಯಿತು. ಒಂದೆಡೆ ಜೀಪಿನಲ್ಲಿ ತಂಡ; ಇನ್ನೊಂದೆಡೆ ಆನೆ ಮೇಲೆ ಸವಾರಿ. ಅರವಳಿಕೆ ಮದ್ದಿನ ಜತೆ, ಬಂದೂಕುಗಳೂ ರೆಡಿ ಇದ್ದವು. ಅದೇ ಜಾಗಕ್ಕೆ ತೆರಳಿದಾಗ ಅಲ್ಲಿಗೆ ಹುಲಿ ಮತ್ತೆ ಬಂದಿದೆ ಎನ್ನುವುದು ಖಚಿತವಾಯಿತು. ನಮ್ಮ ತಂಡ ಹೊಸ ಯೋಜನೆ ರೂಪಿಸಿತು. ಬಟ್ಟೆಯನ್ನು ಸುತ್ತಿ ಮನುಷ್ಯನ ಆಕೃತಿಯೊಂದನ್ನು ಮಾಡಿ ಅದರ ಮೇಲೆ ಸ್ವಲ್ಪ ರಕ್ತ ಚೆಲ್ಲಿ ಅಲ್ಲೇ ಮಲಗಿಸಿದೆವು. ಮೈಸೂರಿನ ಡಾ.ಪ್ರಶಾಂತ್ ಗನ್ ಹಿಡಿದು ಜೀಪ್‌ನಲ್ಲಿ ಕುಳಿತು ಅಲ್ಲೇ ಕಾಯತೊಡಗಿದರು. ಡಾ.ನಾಗರಾಜ್ ಸೂಚನೆಯಂತೆ ಆನೆ ಕಾಂತಿಯ ಮೇಲೆ ಮಾವುತ ಪರ್ವೇಜ್, ಗನ್‌ಮ್ಯಾನ್ ಕರುಂಬಯ್ಯ ಮತ್ತು ನಾನು ಹುಲಿಯನ್ನು ಹುಡುಕುತ್ತಾ ಮುಂದೆ ಸಾಗಿದೆವು.

ಅದೋ ಅಲ್ಲಿ ಕಾಣಿಸುತ್ತಿದೆ ಹುಲಿ! ಅದು ನಮ್ಮಿಂದ ಸುಮಾರು 150 ಮೀಟರ್ ದೂರದಲ್ಲಿತ್ತು. 20 ಮೀಟರ್‌ನಷ್ಟು ಹತ್ತಿರಕ್ಕೆ ಹೋಗು ಎಂದು ಮಾವುತನಿಗೆ ಸೂಚಿಸಿದೆ. ಹುಲಿ ನಮ್ಮ ಮೇಲೆ ಎರಗಿದರೆ ಮಾತ್ರ ಗುಂಡು ಹಾರಿಸಿ ಎಂದು ಗನ್‌ಮ್ಯಾನ್‌ಗೆ ಹೇಳಿ, ನಾನು ಅರವಳಿಕೆ ಮದ್ದನ್ನು ಕೈಗೆತ್ತಿಕೊಂಡೆ. ಇನ್ನು ಬಿಟ್ಟರೆ ಸಿಗಲಿಕ್ಕಿಲ್ಲ ಎಂದು ಮನಸ್ಸಿಗೆ ಬಂದ ಕೂಡಲೇ ಅರವಳಿಕೆ ಮದ್ದು ಹಾರಿಸಿದೆ. ಅದು ಸೀದಾ ಹೋಗಿ ಹುಲಿಯ ಬಲತೊಡೆಗೆ ಚುಚ್ಚಿತು. ತಕ್ಷಣ ಹುಲಿ ಹೆದರಿ ಎಗರಿ ಮಾಯವಾಯಿತು.

ಔಷಧಿಯ ಪರಿಣಾಮ ತೀವ್ರವಾಗಲಿದೆ ಎನ್ನುವುದು ನನಗೆ ಖಚಿತವಿತ್ತು. ಹುಲಿ ಅಲ್ಲೇ ಎಲ್ಲೋ ಬಿದ್ದಿರಬಹುದು ಎಂದು ಅರಸುತ್ತಾ ನಮ್ಮ ಆನೆ ಸವಾರಿ ಮುಂದಕ್ಕೆ ಹೋಯಿತು. ಸ್ವಲ್ಪ ದೂರದಲ್ಲೇ ಆ ಹುಲಿ ಮಲಗಿ ನೀರು ಕುಡಿಯುತ್ತಿತ್ತು. ಮಧ್ಯಾಹ್ನ ಸುಮಾರು ಹನ್ನೆರಡೂಕಾಲು ಗಂಟೆ. ನಾವು ಕಾದು ಕುಳಿತೆವು. 15 ನಿಮಿಷಗಳಲ್ಲಿ ಹುಲಿ ಪೂರ್ಣ ಮತ್ತು ಬಂದು ಮಲಗಿತು. ಡಾ.ನಾಗರಾಜ್ ಮತ್ತು ತಂಡದವರು ಬಲೆ ಬೀಸಿದರು. ಬಲೆ ಹಾಕಿದಾಗ ಒಮ್ಮೆ ಮೇಲಕ್ಕೆ ಎಗರಿದ ಹುಲಿ ಮರುಕ್ಷಣವೇ ನಿಶ್ಚಲವಾಯಿತು. ಡಾ.ಉಮಾಶಂಕರ ಮತ್ತು ಅವರ ತಂಡದವರು ಇನ್ನೊಂದು ಬಲೆ ಬೀಸಿದರು. ನಾಲ್ಕು ಜನರ ಅವರ ತಂಡ ಹುಲಿಯನ್ನು ಎತ್ತಿಕೊಂಡು ಅರ್ಧ ಕಿ.ಮೀ ದೂರದಲ್ಲಿದ್ದ ಬೋನಿಗೆ ತಂದು ಹಾಕಿತು.

ಅಲ್ಲಿ ಬೋನಿನೊಳಗೆ ಮಲಗಿದ ಹುಲಿಗೆ ಡಾ.ನಾಗರಾಜ್ ಅರವಳಿಕೆ ನಿವಾರಿಸುವ ಚುಚ್ಚುಮದ್ದನ್ನು ಹಾರಿಸಿದರು. ಹುಲಿ ಎಚ್ಚರಗೊಂಡಿತು. ಹುಲಿಯನ್ನು ಜೀವಂತ ಹಿಡಿದ ಸಮಾಧಾನ ನಮ್ಮ ತಂಡದ್ದಾಯಿತು. ಅಲ್ಲಿಂದ ಹುಲಿಯನ್ನು ಮೈಸೂರು ಮೃಗಾಲಯಕ್ಕೆ ಕರೆತಂದೆವು.

ಹುಲಿ ಹಿಡಿಯಲು ಕೂಂಬಿಂಗ್ ಆಪರೇಷನ್ ಮಾಡಬೇಕೆಂದು ಮೊದಲು ಯೋಜನೆ ಹಾಕಿಕೊಂಡಿದ್ದೆವು. ಮೂರು ಆನೆಗಳನ್ನು ಬಳಸಿ ಪ್ರತಿಯೊಂದು ಆನೆಯ ಮೇಲೆಯೂ ಮೂವರ ತಂಡ (ವೈದ್ಯ, ಗನ್‌ಮ್ಯಾನ್ ಮತ್ತು ಮಾವುತ) ಸಾಗುವುದು ಒಂದು ತರಹ ಚಕ್ರವ್ಯೂಹ ರಚಿಸಿದಂತೆ. ಮೂರು ಆನೆಗಳಿಗಾಗಿ ಕಾಯುತ್ತಿದ್ದಾಗಲೇ ಹುಲಿ ಕಾಣಿಸಿಕೊಂಡಿತ್ತು. ಮೊದಲು ಅಭಿಮನ್ಯು ಸಾಕಷ್ಟು ಸಹಕರಿಸಿದ. ಕೊನೆಯಲ್ಲಿ ಕಾಂತಿಯಿಂದ ಕಾರ್ಯಸಾಧ್ಯವಾಯಿತು.

ಡಾ.ಚಿಟ್ಟಿಯಪ್ಪನವರು ಅರವಳಿಕೆಯನ್ನು ಎಷ್ಟು ಪ್ರಮಾಣದಲ್ಲಿ ಹೇಗೆ ಬಳಸಬೇಕು, ಆಯಾ ಸಂದರ್ಭಗಳಲ್ಲಿ ಪರಿಸ್ಥಿತಿಗೆ ತಕ್ಕಂತೆ ಹೇಗೆ ಕಾರ್ಯಾಚರಣೆ ರೂಪಿಸಬೇಕು ಎಂಬುದನ್ನು ಮೊದಲೇ ಸೂಚಿಸಿದ್ದು ಕಾರ್ಯಾಚರಣೆಯಲ್ಲಿ ಸಾಕಷ್ಟು ನೆರವಿಗೆ ಬಂತು. ಹುಲಿ ಹಿಡಿದದ್ದು ಯಾರದೇ ಒಬ್ಬಿಬ್ಬರ ಸಾಹಸವಲ್ಲ, ಅದೊಂದು ತಂಡ ಪ್ರಯತ್ನ. ಒಟ್ಟು ಕಾರ್ಯಾಚರಣೆಯಲ್ಲಿ ಸುಮಾರು 100 ಮಂದಿ ಪಾಲ್ಗೊಂಡಿದ್ದರು.

ಕಾಡಿನಲ್ಲಿ ಹುಲಿಗಳಿಗೆ ಆಹಾರವಾಗಿ ಕಡವೆ, ಜಿಂಕೆ, ಮುಳ್ಳು ಹಂದಿ, ಕಾಡೆಮ್ಮೆ ಮತ್ತಿತರ ಪ್ರಾಣಿಗಳು ಸಿಗುತ್ತವೆ. ಮೃಗಾಲಯದಲ್ಲಿ ಕುರಿ, ಮೇಕೆಗಳ ಮಾಂಸವನ್ನು ನೀಡುತ್ತಾರೆ. ಸಾಮಾನ್ಯವಾಗಿ ಯಾವುದೇ ಹುಲಿ ಉದ್ದೇಶ–ಪೂರ್ವಕವಾಗಿ ಮಾಂಸ ತಿನ್ನಲೆಂದೇ ಮನುಷ್ಯನ ಮೇಲೆ ದಾಳಿ ಮಾಡುವುದಿಲ್ಲ.

ನಾವು ಸೆರೆ ಹಿಡಿದ ಹುಲಿಯ ಬಾಯಲ್ಲಿ ಮುಳ್ಳುಹಂದಿಯ ಮುಳ್ಳೊಂದು ಸಿಕ್ಕಿ ಹಾಕಿಕೊಂಡಿತ್ತು. ನಾನು ಅದನ್ನು ಹುಲಿಯ ಬಾಯಿಯಿಂದ ಎಳೆದಾಗ ಹೊರಗೆ ಬರಲಿಲ್ಲ. ಮೈಸೂರಿನ ಮೃಗಾಲಯಕ್ಕೆ ಸಾಗಿಸಿದ ಮೇಲೆ ಅಲ್ಲಿನ ವೈದ್ಯರು ಆ ಮುಳ್ಳನ್ನು ಹೊರತೆಗೆದರು. ಸದ್ಯಕ್ಕೆ ಆ ಹುಲಿ ಮೈಸೂರು ಮೃಗಾಲಯದಲ್ಲಿ ಸುರಕ್ಷಿತವಾಗಿದೆ. ಗಾಯಗಳು ಗುಣವಾಗಿವೆ. ಪಂಜರದ ವಾಸಕ್ಕೆ ಹೊಂದಿಕೊಂಡಿದೆ. ಈ ಹುಲಿಯ ಮಲದಲ್ಲಿ ಮನುಷ್ಯನ ಡಿಎನ್‌ಎ ಸುಳಿವು ಇದೆಯೇ ಎನ್ನುವುದನ್ನು ತಿಳಿದುಕೊಳ್ಳಲು ಹೈದರಾಬಾದಿಗೆ ಕಳುಹಿಸಿರುವ ಸ್ಯಾಂಪಲ್ ಬಗ್ಗೆ ಇನ್ನಷ್ಟೇ ಮಾಹಿತಿ ಬರಬೇಕಿದೆ.

ನಿರೂಪಣೆ: ಕೃಷ್ಣವೇಣಿ ಪ್ರಸಾದ್ ಮುಳಿಯ
(ಹೆಚ್ಚುವರಿ ಮಾಹಿತಿ: ಡಿ.ರಾಜ್‌ಕುಮಾರ್)

### ಕಾಡಿನ ಅಂಚಿನ ಗ್ರಾಮಸ್ಥರು ವಹಿಸಬೇಕಾದ ಎಚ್ಚರಿಕೆಗಳು:

- ★ ಗಾಯಗೊಂಡ ಹುಲಿ ಕಾಣಿಸಿದರೆ ಅಥವಾ ದನಗಳನ್ನು ಹೊತ್ತೊಯ್ದರೆ ಆ ಬಳಿಕ ಜನರು ಹೆಚ್ಚು ಎಚ್ಚರಿಕೆಯಿಂದ ವರ್ತಿಸಬೇಕು.
- ★ ಹುಲಿ ಇರುವ ಜಾಗದಲ್ಲಿ ಓಡಾಡಬೇಕಾದರೆ ಒಬ್ಬೊಬ್ಬರೇ ಓಡಾಡುವ ಬದಲು ಹೆಚ್ಚು ಜನರು ಇರುವ ಗುಂಪಿನಲ್ಲಿ ಓಡಾಡಬೇಕು.
- ★ ಕಾಡಿನಲ್ಲಿ ಓಡಾಡುವಾಗ ಹೆಚ್ಚು ಶಬ್ದಗಳನ್ನು ಮಾಡುತ್ತಾ, ಸಾಧ್ಯವಾದರೆ ಗಂಟೆ ಬಾರಿಸುತ್ತಾ ಓಡಾಡಬೇಕು.
- ★ ಕಾಡಂಚಿನಲ್ಲಿ ದನ ಕಾಯುವವರು ಬಗ್ಗಿ ಕುಳಿತುಕೊಳ್ಳದೆ, ಸಾಧ್ಯವಾದಷ್ಟು ನಿಂತುಕೊಂಡೇ (ಮರಗಳಿಗೆ ಒರಗಿಕೊಂಡು) ಇರಬೇಕು. ದನಕರುಗಳನ್ನು ಕಾಡಿನ ಒಳಕ್ಕೆ ಅಟ್ಟಬಾರದು.
- ★ ಮನೆಯಲ್ಲೇ ಶೌಚಾಲಯದ ವ್ಯವಸ್ಥೆ ಮಾಡಿಕೊಳ್ಳುವುದು ಒಳ್ಳೆಯದು.



ಕಾರ್ಯಾಚರಣೆಯಲ್ಲಿ ಕಾಂತಿ.